ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿರುವ ನೈಟುಗಳು

57- ಶ್ರೀ ಆರ್. ವಿ. ದೇವರಾಜ್ (ಚಾಮರಾಜಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993ನೇ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ನಿವೇಶನಗಳನ್ನು ಸಾರ್ವಜನಿಕರಿಗೆ ವಿತರಿಸಲಾಗಿದೆ.*

ಆ) *1993ರಲ್ಲಿ ಎಷ್ಟು ಭಾರಿ ನಿವೇಶನಕ್ಕಾಗಿ ಅರ್ಜಿಗಳನ್ನು ಕೋರಲಾಗಿತ್ತು.*

ಇ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಈ ಹಿಂದೆ ಯಾವಾಗ ಸಾರ್ವಜನಿಕರಿಂದ ನಿವೇಶನಗಳಿಗಾಗಿ ಅರ್ಜಿಯನ್ನು ಕರೆದಿದ್ದರು.*

ಈ) *ಅವುಗಳ ಪೈಕಿ, ಎಷ್ಟು ಜನರಿಗೆ ನಿವೇಶನಗಳನ್ನು ನೀಡಲಾಗಿದೆ.*

ಉ) *ಸಾರ್ವಜನಿಕರಿಂದ ನಿವೇಶನಕ್ಕಾಗಿ ಪಡೆದುಕೊಂಡ ಹಣವೆಷ್ಟು*

ಊ) *ಈ ಹಣವನ್ನು ಯಾವಾಗ ಪಡೆಯಲಾಯಿತು.*

ಋ) *ಈ ಹಣಕ್ಕೆ ಸಾರ್ವಜನಿಕರಿಗೆ ಬಡ್ಡಿ ನೀಡಲಾಗುವುದೇ?*

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :

ಅ) ಈ ಅವಧಿಯಲ್ಲಿ ಪ್ರಾಧಿಕಾರವು ನಿವೇಶನ ವಿತರಣೆ ಮಾಡಿರುವುದಿಲ್ಲ

ಆ) ಈ ಅವಧಿಯಲ್ಲಿ ನಿವೇಶನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿರುವುದಿಲ್ಲ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಕ್ಟೋಬರ್ 1988 ಹಾಗೂ ಡಿಸೆಂಬರ್ 1988ರಲ್ಲಿ ಅರ್ಜಿಗಳನ್ನು ಕರೆಯಲಾಗಿತ್ತು.

ಈ) ಅಕ್ಟೋಬರ್ 1988 ಹಾಗೂ ಡಿಸೆಂಬರ್ 1988ರ ಪ್ರಕಟಣೆಗೆ ಅನುಗುಣವಾಗಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ನಿವೇಶನ ಹಂಚಿಕೆ ಮಾಡಿರುವುದಿಲ್ಲ.

ಉ) ಅಕ್ಟೋಬರ್ 1988 ಹಾಗೂ ಡಿಸೆಂಬರ್ 1988ರ ಪ್ರಕಣೆಗಳಿಗೆ ಅನುಗುಣವಾಗಿ ದಿನಾಂಕ 30-12-88ರಿಂದ 28-2-1989ರವರೆಗೆ ಒಟ್ಟು 33.93 ಕೋಟಿ ರೂಪಾಯಿಗಳನ್ನು ಪ್ರಾರಂಭಿಕ ಠೇವಣಿ ರೂಪದಲ್ಲಿ ಪಡೆಯಲಾಗಿದೆ.

ಸಾರ್ವಜನಿಕರಿಂದ ಪಡೆದ ಹಣಕ್ಕೆ 1984ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ನಿಯಮಗಳ ಪ್ರಕಾರ ಬಡ್ಡಿಯನ್ನು ನೀಡಲು ಅವಕಾಶವಿರುವುದಿಲ್ಲ. ಅರ್ಜಿದಾರರು ಪಾವತಿ ಮಾಡಿದ ಪ್ರಾರಂಭಿಕ ಠೇವಣಿ ಹಣಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ನೀಡಲಾಗುವುದಿಲ್ಲವೆಂದು ಆಯಾ ಪ್ರಕಟಣೆಗಳಲ್ಲಿಯೇ ತಿಳಿಸಲಾಗಿದೆ.

ಬೆಂಗಳೂರು ನಗರದಲ್ಲಿರುವ ಖೋಟಾ ಪಡಿತರ ಚೀಟಿಗಳು

58 - ಶ್ರೀ ಆರ್.ವಿ. ದೇವರಾಜ್ (ಚಾಮರಾಜ ಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಉತ್ತರಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993ನೇ ಜನವರಿಯಿಂದ ಡಿಸಂಬರ್ ಅಂತ್ಯದವರೆಗೆ ಬೆಂಗಳೂರು ನಗರದಲ್ಲಿ ಎಷ್ಟು ಖೋಟಾ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲಾಗಿದೆ.*

ಆ) *ಅದಕ್ಕಾಗಿ ವಿಶೇಷ ದಳವನ್ನು ನೇಮಿಸಲಾಗಿದೆಯೇ?*

ಇ) *ಹಲವಾರು ಪಡಿತರ ಚೀಟಿಗಳಲ್ಲಿ ವಾಸ ಮಾಡದೇ ಇರತಕ್ಕ ಜನರ ಹೆಸರುಗಳನ್ನು ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ, 1993ರಲ್ಲಿ ಅಂತಹ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಯಿತು.*

ಉ) *ಪಡಿತರ ಚೀಟಿದಾರರರು ಸ್ವಪ್ರೇರಣೆಯಿಂದ ಹೆಚ್ಚುವರಿ ಹೆಸರುಗಳನ್ನು ತೆಗೆಸಿಹಾಕಿಕೊಳ್ಳಬೇಕೆಂದು ಸರ್ಕಾರವು ಏನಾದರೂ ತಿಳುವಳಿಕೆ ನೀಡಿದೆಯೇ?*